ಮೂಲ ದಾವಾ ಸಂಖ್ಯೆ. 143/2013 ಡಿ ಡಬ್ಲ್ಯೂ 1

(ದಿನಾಂಕ 10-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಆಸ್ತಿ ನಂ.272 ರ 6 ಕರಾಕರಣೆ ಯಾದಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-8 ರಿಂದ 13 ಎಂದು, 11 ತೆರಿಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-14 ರಿಂದ 24 ಎಂದು, ದಿಃ19-08-2010 ರಂದು ನೀಡಿರುವಂತಹ ಕಟ್ಟಡ ಪರವಾನಿಗೆ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ-25 ಎಂದು, ದಿಃ08-09-2011 ರಂದು ನೀಡಿರುವಂತಹ ಕಟ್ಟಡ ನವೀಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ-26 ಎಂದು, ಒಂದು ಸಿ ಡಿ ಹಾಜರುಪಡಿಸಿದ್ದು ಅದನ್ನು ನಿಡಿ-27 ಎಂದು, ಅದಕ್ಕೆ ಸಂಬಂಧಿಸಿದ ರಶೀದಿ ಹಾಜರುಪಡಿಸಿದ್ದು ಅದನ್ನು ನಿಡಿ-28 ಎಂದು, ದಿಃ29-11-2004 ರ ಠರಾವಿನ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-29 ಎಂದು, ಹಕ್ಕು ಬದಲಾವಣೆ ಪ್ರತಿಯ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-30 ಎಂದು, ಎಂ ನಂ.8/2013-14 ರ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-31 ಎಂದು, ಗ್ರಾಮ ಪಂಚಾಯ್ತಿಯವರು ನೀಡಿರುವಂತಹ ದೃಢೀಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ-32 ಎಂದು, ದಿಃ02-07-2025 ರಂದು ಗ್ರಾಮ ಪಂಚಾಯ್ತಿಗೆ ನೀಡಿರುವಂತಹ ಅರ್ಜಿಯ ಸ್ವಿಕೃತಿ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-33 ಎಂದು, ಮನೆ ಕಟ್ಟಲು ಪರವಾನಿಗೆ ಪತ್ರ ಮತ್ತು ನೀಲಿ ನಕಾಶೆಯ ದೃಢೀಕೃತ ನಕಲು ಹಾಜರುಪಡಿಸಿದ್ದು ಅವುಗಳನ್ನು ನಿಡಿ-34 ಮತ್ತು ನಿಡಿ-34 ಎ ಎಂದು, ಸದರಿ ದಾವೆಯಲ್ಲಿನ ಮಧ್ಯಂತರ ಅರ್ಜಿ ನಂ.2 ಮತ್ತು ಅದರ ಮೇಲಿನ ಆದೇಶದ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-35 ಮತ್ತು 36 ಎಂದು, ಪ್ರಸ್ತುತ ದಾವೆಯಲ್ಲಿನ ಮಧ್ಯಂತರ ಅರ್ಜಿ ನಂ.3, ಅದಕ್ಕೆ ಸಲ್ಲಿಸಿರುವ ತಕರಾರು ಮತ್ತು ಆದೇಶದ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-37 ರಿಂದ 39 ಎಂದು, ಆಸ್ತಿ ನಂ.6/272 ರ ನಮೂನೆ ನಂ.9 ಮತ್ತು 11 ಎ ರ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-40 ಮತ್ತು 41 ಎಂದು, 4 ಫೋಟೋ, ಒಂದು ಪೆನ್ ಡ್ರೈವ್ ಮತ್ತು ಒಂದು ರಶೀದಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-42 ರಿಂದ 47 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ